# ಕರ್ನಾಟಕ ಚುನಾವಣಾ ಕಾವಲು (KEW)

**ಮಾಧ್ಯಮಗಳಿಗೆ ಮಾಹಿತಿ** **ಏಪ್ರಿಲ್ 23, 2013**

# ಕರ್ನಾಟಕ ವಿಧಾನ ಸಭೆ ಚುನಾವಣೆ 2013ರಲ್ಲಿ ಮರು ಆಯ್ಕೆ ಬಯಸುತ್ತಿರುವ ಶಾಸಕರ ಘೋಷಿತ ಆಸ್ತಿ ಪ್ರಮಾಣದ ಹೋಲಿಕೆ.

## ಸಂಗ್ರಹ ಮಾಹಿತಿ

- **ಮತ್ತೆ ಸ್ಪರ್ಧಿಸುತ್ತಿರುವ ಶಾಸಕರು:** ಕರ್ನಾಟಕ ವಿಧಾನ ಸಭೆ 2013ರ ಚುನಾವಣೆಯಲ್ಲಿ ಮರು ಆಯ್ಕೆ ಬಯಸುತ್ತಿರುವ 179 ಶಾಸಕರು ನೀಡಿರುವ ಸ್ವಯಂಘೋಷಿತ ಮಾಹಿತಿಗಳನ್ನು ಕರ್ನಾಟಕ ಚುನಾವಣಾ ಕಾವಲು [Karnataka Election Watch (KEW)] ಮತ್ತು ಪ್ರಜಾಸತ್ತೀಯ ಸುಧಾರಣೆಗಾಗಿ ಸಂಘಟನೆ [Association for Democratic Reforms (ADR)] ವಿಶ್ಲೇಷಿಸಿದೆ.
- **2008ರ ಅವಧಿಯಲ್ಲಿದ್ದ ಇವರ ಸರಾಸರಿ ಆಸ್ತಿಪಾಸ್ತಿ:** ವಿವಿಧ ಪಕ್ಷಗಳಿಂದ 2008ರ ವಿಧಾನ ಸಭೆ ಚುನಾವಣೆಗೆ ಸ್ಪರ್ಧಿಸಿದ್ದಾಗ ಈ 179 ಶಾಸಕರ ಸರಾಸರಿ ಆಸ್ತಿ ರೂ. 10.59 ಕೋಟಿ ಆಗಿತ್ತು.
- **2013ರಲ್ಲಿ ಚುನಾವಣೆಗೆ ಸ್ಪರ್ಧಿಸುತ್ತಿರುವಾಗ ಇವರ ಸರಾಸರಿ ಆಸ್ತಿಪಾಸ್ತಿ:** ಮತ್ತೆ ಮರು ಆಯ್ಕೆ ಬಯಸಿ ಚುನಾವಣೆಗೆ ಸ್ಪರ್ಧಿಸಿರುವ ಈ 179 ಹಾಲಿ ಶಾಸಕರ ಆಸ್ತಿಯ ಸರಾಸರಿ ರೂ. 19.87 ಕೋಟಿ ಆಗಿದೆ.
- **ಕಳೆದ 5 ವರ್ಷಗಳಲ್ಲಿ ಆಗಿರುವ ಆಸ್ತಿ ಪ್ರಮಾಣದ ಸರಾಸರಿ ಹೆಚ್ಚಳ (2008–13):** 2008ರ ಕರ್ನಾಟಕ ವಿಧಾನ ಸಭೆ ಚುನಾವಣೆಯಿಂದ 2013ರ ಚುನಾವಣೆಯ ಹೊತ್ತಿಗೆ ಹಾಲಿ ಶಾಸಕರ ಆಸ್ತಿಪಾಸ್ತಿಯ ಮೊತ್ತದಲ್ಲಿ ಸರಾಸರಿ ರೂ. 9.27 ಕೋಟಿ ಹೆಚ್ಚಿದೆ.
- **ಕಳೆದ 5 ವರ್ಷಗಳಲ್ಲಿ (2008–13) ಆಗಿರುವ ಸರಾಸರಿ ಹೆಚ್ಚಳ :** ಮರು ಆಯ್ಕೆ ಬಯಸುತ್ತಿರುವ ಈ ಹಾಲಿ 179 ಶಾಸಕರ ಆಸ್ತಿಪಾಸ್ತಿಯ ಸರಾಸರಿ ಹೆಚ್ಚಳ ಶೇ. 88
- **ಕಳೆದ 5 ವರ್ಷಗಳಲ್ಲಿ (2008–13) ಆಗಿರುವ ಅತ್ಯಂತ ಹೆಚ್ಚು ಆಸ್ತಿ ಬೆಳವಣಿಗೆ :**

  ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಕನಕಪುರ ವಿಧಾನಸಭಾ ಕ್ಷೇತ್ರದಿಂದ ಮರು ಆಯ್ಕೆಗಾಗಿ ಸ್ಪರ್ಧಿಸುತ್ತಿರುವ **ಡಿ.ಕೆ. ಶಿವಕುಮಾರ್** ಅವರ ಆಸ್ತಿ ಈ ಕಳೆದ 5 ವರ್ಷಗಳಲ್ಲಿ **ರೂ. 175.91 ಕೋಟಿ** ಹೆಚ್ಚಾಗಿದೆ ಎಂದು ಘೋಷಿಸಿಕೊಂಡಿದ್ದಾರೆ. ಇದೇ ಅತಿ ಹೆಚ್ಚು. (2008ರಲ್ಲಿ ಅವರು ಘೋಷಿಸಿಕೊಂಡಿದ್ದ ಆಸ್ತಿಯ ಮೊತ್ತ ರೂ. 75.59 ಕೋಟಿ. ಈಗ ರೂ. 251.50 ಕೋಟಿ).

  ಗೋವಿಂದರಾಜ ನಗರ ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಮರು ಆಯ್ಕೆಗಾಗಿ ಸ್ಪರ್ಧಿಸುತ್ತಿರುವ **ಪ್ರಿಯಾ ಕೃಷ್ಣ** ಅವರ ಆಸ್ತಿ **ರೂ. 143.36 ಕೋಟಿ**ಯಷ್ಟು ಹೆಚ್ಚಾಗಿದೆ ಎಂದು ಘೋಷಿಸಿಕೊಂಡಿದ್ದಾರೆ. (2008ರಲ್ಲಿ ಅವರ ಘೋಷಿಸಿಕೊಂಡಿದ್ದ ಆಸ್ತಿಯ ಮೊತ್ತ ರೂ. 767.61 ಕೋಟಿ. 2013ರಲ್ಲಿ ರೂ. 910.98 ಕೋಟಿ).

  ಕಲಘಟಗಿ ವಿಧಾನಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಮರು ಆಯ್ಕೆಗಾಗಿ ಸ್ಪರ್ಧಿಸುತ್ತಿರುವ ಶಾಸಕ **ಸಂತೋಷ್ ಲಾಡ್** ಅವರ ಘೋಷಿತ ಆಸ್ತಿ **ರೂ. 124.85 ಕೋಟಿ** ಹೆಚ್ಚಾಗಿದೆ. (2008ರಲ್ಲಿ ಅವರು ಘೋಷಿಸಿಕೊಂಡಿದ್ದ ಆಸ್ತಿಯ ಮೊತ್ತ ರೂ. 61.54 ಕೋಟಿ ಮತ್ತು 2013ರಲ್ಲಿ ಘೋಷಿಸಿರುವುದು ರೂ. 186.40 ಕೋಟಿ)

- **ಐದು ವರ್ಷದ ಅವಧಿಯಲ್ಲಿ (2008–13) ಅತಿ ಹೆಚ್ಚು ಶೇಕಡಾವಾರು ಆಸ್ತಿ ಹೆಚ್ಚಳ:**

  ಬಂಟ್ವಾಳ ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಿರುವ **ರಮಾನಂದ ರೈ** ಅತಿ ಹೆಚ್ಚು ಶೇಕಡಾವರು (21051%) ಆಸ್ತಿ ಹೆಚ್ಚಳ ಘೋಷಿಸಿಕೊಂಡಿದ್ದಾರೆ. ಅವರ ಆಸ್ತಿ ರೂ. 1.71 ಲಕ್ಷದಿಂದ (2008ರಲ್ಲಿ) ರೂ. 3.62 ಕೊಟಿ (2013) ಆಗಿದೆಯೆಂದು ಘೋಷಿಸಿಕೊಂಡಿದ್ದಾರೆ.

  ಮಡಿಕೇರಿ ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಮೂಲಕ ಮರು ಸ್ಪರ್ಧೆಗೆ ನಿಂತಿರುವ **ಅಪ್ಪಚ್ಚು ರಂಜನ್** ತಮ್ಮ ಆಸ್ತಿ ಶೇ. 5752ರಷ್ಟು ಹೆಚ್ಚಾಗಿದೆ ಎಂದು ಘೋಷಿಸಿಕೊಡಿದ್ದಾರೆ. ಅವರ ಆಸ್ತಿ ರೂ. 18.20 ಲಕ್ಷದಿಂದ (2008) ರೂ. 10.65 ಕೋಟಿ (2013)ಗೆ ಹೆಚ್ಚಿದೆ. (ಅವರ ಬಳಿ ಇರುವ ಆರು ಮೋಟಾರು ವಾಹನಗಳು, ಆಭರಣಗಳು ಮತ್ತು ಸ್ಥಿರಾಸ್ತಿಗಳ ಮೌಲ್ಯವನ್ನು ಅವರು ನೀಡಿಲ್ಲ).

  ಬೆಂಗಳೂರಿನ ಸಿ.ವಿ.ರಾಮನ್ ನಗರ ವಿಧಾನ ಸಭಾ ಕ್ಷೇತ್ರದಿಂದ ಮರು ಆಯ್ಕೆಗೆ ಭಾರತೀಯ ಜನತಾ ಪಕ್ಷದ ಮೂಲಕ ನಿಂತಿರುವ **ಎಸ್. ರಘು** ಅವರು ತಮ್ಮ ಆಸ್ತಿ ಶೇ. 4241 ಹೆಚ್ಚಾಗಿದೆ ಎಂದು ಘೋಷಿಸುವ ಮೂಲಕ ಮೂರನೇ ಸ್ಥಾನದಲ್ಲಿದ್ದಾರೆ. ಅವರ ಆಸ್ತಿ (2008ರಲ್ಲಿ) ರೂ. 72.88 ಲಕ್ಷದಿಂದ (2013ರಲ್ಲಿ) ರೂ. 31.64 ಕೋಟಿಯಷ್ಟು ಹೆಚ್ಚಾಗಿದೆ.

- **ಕಳೆದ 5 ವರ್ಷಗಳಲ್ಲಿ ಆಸ್ತಿ ಕಡಿಮೆಯಾದವರು (2008–13):** ತಮ್ಮ ಆಸ್ತಿ 2008ರಿಂದ 2013ಕ್ಕೆ ಬರುವಷ್ಟರಲ್ಲಿ ಕಡಿಮೆಯಾಯಿತೆಂದು 8 ಹಾಲಿ ಶಾಸಕರು ಘೋಷಿಸಿಕೊಂಡಿದ್ದಾರೆ.

  ಅತಿ ಹೆಚ್ಚು ಕಳೆದುಕೊಂಡವರೆಂದು (ಶೇ. 77 ಕಡಿಮೆ) ಘೋಷಿಸಿಕೊಂಡಿರುವವರು ಈ ಮೊದಲು ಕಾಂಗ್ರೆಸ್ ಪ್ರತಿನಿಧಿಸಿ ಈಗ ಸ್ವತಂತ್ರವಾಗಿ ಭದ್ರಾವತಿಯಿಂದ ಸ್ಪರ್ಧಿಸುತ್ತಿರುವ **ಬಿ.ಕೆ. ಸಂಗಮೇಶ್ವರ** [ರೂ. 5.83 ಕೋಟಿಯಿಂದ (2008) ರೂ. 1.66 ಕೋಟಿಗಿಳಿದಿದೆ (2013)].

  ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದಿಂದ ಮರು ಆಯ್ಕೆಗೆ ಸ್ಪರ್ಧಿಸುತ್ತಿರುವ **ಸಿ.ಟಿ. ರವಿ** ಅವರು ತಮ್ಮ ಆಸ್ತಿ ಶೇ.54 ಕಡಿಮೆಯಾಗಿದೆಯೆಂದು ಘೋಷಿಸಿದ್ದಾರೆ (2008ರಲ್ಲಿ ರೂ. 7.85 ಕೋಟಿಯಿಂದ 2013ರಲ್ಲಿ ರೂ.3.59 ಕೋಟಿಗೆ ಇಳಿದಿದೆ)

  ಇಂಡಿ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರವಾಗಿ ಸ್ಪರ್ಧಿಸುತ್ತಿರುವ **ಡಾ. ಬಗಲಿ ಸಾರ್ವಭೌಮ** ಆಸ್ತಿ ಕಳೆದುಕೊಂಡವರಲ್ಲಿ ಮೂರನೆಯ ಸ್ಥಾನದಲ್ಲಿದ್ದಾರೆ [ಒಟ್ಟು ಶೇ. 51 ಕಡಿಮೆ. ರೂ. 8.02 ಕೋಟಿ (2008)ರಿಂದ ರೂ. 3.94 ಕೋಟಿ (2013)]

- **ನಂಬಿಕೆ ಅರ್ಹವಾದ ಶಾಸಕರನ್ನು ಆಯ್ಕೆ ಮಾಡಲು ಮತದಾರರಿಗೆ ಸಹಾಯಮಾಡಲು ಮಾಹಿತಿಗಾಗಿ ಉಚಿತ ಸಹಾಯವಾಣಿ (1–800–110–440)ಗೆ ಕರೆ ಮಾಡಿ ಅಥವಾ 9246556070 ಮೊಬೈಲ್ ಸಂಖ್ಯೆಗೆ MYNETA <ಪಿನ್ ಕೋಡ್ ಸಂಖ್ಯೆ> ಬರೆದು ಎಸ್.ಎಂ.ಎಸ್. ಮಾಡಿ ಅಥವಾ 9246556070 ಮೊಬೈಲ್ ಸಂಖ್ಯೆಗೆ MYNETA <ವಿಧಾನ ಸಭಾ ಕ್ಷೇತ್ರದ ಹೆಸರು> ಬರೆದು ಎಸ್.ಎಂ.ಎಸ್. ಮಾಡಿ.**

## ಕರ್ನಾಟಕ ವಿಧಾನ ಸಭೆ ಚುನಾವಣೆ 2013ರಲ್ಲಿ ಮರು ಆಯ್ಕೆ ಬಯಸುತ್ತಿರುವ ಶಾಸಕರ ಘೋಷಿತ ಆಸ್ತಿ ಪ್ರಮಾಣದ ಹೋಲಿಕೆ.

### ಮರು ಆಯ್ಕೆಗೆ ನಿಂತಿರುವ ಶಾಸಕರ ಆಸ್ತಿಯ ಸರಾಸರಿ ಹೆಚ್ಚಳ: ಪಕ್ಷವಾರು

ಮರು ಆಯ್ಕೆ ಬಯಸುತ್ತಿರುವ ಹಾಲಿ ಶಾಸಕರ ಸರಾಸರಿ ಆಸ್ತಿಪಾಸ್ತಿಯ ಹೆಚ್ಚಳ ತೋರುವ ಪಕ್ಷವಾರು ಪಟ್ಟಿ. 2008ರಲ್ಲಿ ನಡೆದ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ಬಿ.ಜೆ.ಪಿಯ ಅಭ್ಯರ್ಥಿಗಳಾಗಿ ಸಲ್ಲಿಸಿದ್ದ 73 ಘೋಷಣಾ ಪತ್ರಗಳಲ್ಲಿ ನಮೂದಿಸಿದ್ದ ಆಸ್ತಿಪಾಸ್ತಿ ವಿವರಗಳನ್ನು 2013ರ ಚುನಾವಣಾ ಸಂದರ್ಭದಲ್ಲಿ ಸಲ್ಲಿಸಿರುವ ಆದಾಯ ಘೋಷಣಾ ಪತ್ರದೊಡನೆ ಹೋಲಿಸಿ ನೋಡಲಾಗಿದೆ. ಇದೇ ಪ್ರಕ್ರಿಯೆಯನ್ನು ಉಳಿದ ಪಕ್ಷಗಳ ಹುರಿಯಾಳುಗಳಿಗೂ ಅನ್ವಯಿಸಲಾಗಿದೆ. ಬಿ.ಜೆ.ಪಿಯಿಂದ ಮತ್ತೆ ಆಯ್ಕೆಗೆ ಟಿಕೆಟ್ ಪಡೆದಿರುವ 73 ಹಾಲಿ ಶಾಸಕರ ಒಟ್ಟು ಸರಾಸರಿ ಆಸ್ತಿಯಲ್ಲಿ ರೂ. 6.87 ಕೋಟಿ ಹೆಚ್ಚಳವಾಗಿದೆ. ಮತ್ತೆ ಚುನಾವಣೆಗೆ ಸ್ಪರ್ಧಿಸುತ್ತಿರುವ ವಿವಿಧ ಶಾಸಕರ ಸರಾಸರಿ ಆಸ್ತಿ ಹೆಚ್ಚಳವನ್ನು ಪಕ್ಷಾವಾರು ನೀಡಲಾಗಿದೆ.

| ಕ್ರಮ ಸಂಖ್ಯೆ | 2013 ಚುನಾವಣೆಯಲ್ಲಿ ಪ್ರತಿನಿಧಿಸಿದ್ದ ಪಕ್ಷ | ಒಟ್ಟು ಗೆಲವುಗಳು | 2013ರ ಚುನಾವಣೆ ಸಂದರ್ಭದಲ್ಲಿ ಸರಾಸರಿ ಆಸ್ತಿ ಘೋಷಣೆ | 2008ರ ಚುನಾವಣೆಯಲ್ಲಿ ಸರಾಸರಿ ಆಸ್ತಿ ಘೋಷಣೆ | ಸರಾಸರಿ ಆಸ್ತಿ ಹೆಚ್ಚಳ | ಸರಾಸರಿ ಶೇ. ಆಸ್ತಿ ಹೆಚ್ಚಳ |
|---|---|---|---|---|---|---|
| 1. | BJP / ಬಿ.ಜೆ.ಪಿ | 73 | 12,09,58,381<br>12 Crore+ | 5,21,67,175<br>5 Crore+ | 6,87,91,206<br>6 Crore+ | 132% |
| 2. | INC / ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 57 | 36,43,17,728<br>36 Crore+ | 22,71,66,395<br>22 Crore+ | 13,71,51,333<br>13 Crore+ | 60% |
| 3. | JD(S) / ಜೆ.ಡಿ. (ಎಸ್) | 25 | 17,20,54,456<br>17 Crore+ | 5,76,62,676<br>5 Crore+ | 11,43,91,780<br>11 Crore+ | 198% |
| 4. | KJP / ಕೆ.ಜೆ.ಪಿ. | 12 | 3,61,08,209<br>3 Crore+ | 1,32,61,238<br>1 Crore+ | 2,28,46,971<br>2 Crore+ | 172% |
| 5. | IND / ಸ್ವತಂತ್ರರು | 8 | 8,19,73,729<br>8 Crore+ | 4,47,03,232<br>4 Crore+ | 3,72,70,497<br>3 Crore+ | 83% |
| 6. | BSRC / ಬಿ.ಎಸ್.ಆರ್.ಸಿ. | 2 | 21,78,67,775<br>21 Crore+ | 10,40,46,751<br>10 Crore+ | 11,38,21,024<br>11 Crore+ | 109% |
| 7. | NCP / ಎನ್.ಸಿ.ಪಿ. | 1 | 1,60,90,406<br>1 Crore+ | 26,51,000<br>26 Lacs+ | 1,34,39,406<br>1 Crore+ | 507% |
| 8. | SP / ಎಸ್.ಪಿ. | 1 | 13,08,04,639<br>13 Crore+ | 3,57,08,876<br>3 Crore+ | 9,50,95,763<br>9 Crore+ | 266% |
| | ಒಟ್ಟು | **179** | **19,87,10,349**<br>**19 Crore+** | **10,59,29,995**<br>**10 Crore+** | **9,27,80,353**<br>**9 Crore+** | **88%** |

**Table: Average asset increase of re-contesting MLAs – party wise**

### ಅತಿ ಶ್ರೀಮಂತ ಐದು ಶಾಸಕರು :

ಬಂಟ್ವಾಳ ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಿರುವ **ರಮಾನಂದ ರೈ** ಅತಿ ಹೆಚ್ಚು ಶೇಕಡಾವರು (21051%) ಆಸ್ತಿ ಹೆಚ್ಚಳ ಘೋಷಿಸಿಕೊಂಡಿದ್ದಾರೆ. ಅವರ ಆಸ್ತಿ ರೂ. 1.71 ಲಕ್ಷದಿಂದ (2008ರಲ್ಲಿ) ರೂ. 3.62 ಕೊಟಿ (2013) ಆಗಿದೆಯೆಂದು ಘೋಷಿಸಿಕೊಂಡಿದ್ದಾರೆ.

ಮಡಿಕೇರಿ ವಿಧಾನ ಸಭಾ ಕ್ಷೇತ್ರದಿಂದ ಭಾರತೀಯ ಜನತಾ ಪಾರ್ಟಿಯ ಮೂಲಕ ಮರು ಸ್ಪರ್ಧೆಗೆ ನಿಂತಿರುವ **ಅಪ್ಪಚ್ಚು ರಂಜನ್** ತಮ್ಮ ಆಸ್ತಿ ಶೇ. 5752ರಷ್ಟು ಹೆಚ್ಚಾಗಿದೆ ಎಂದು ಘೋಷಿಸಿಕೊಡಿದ್ದಾರೆ. ಅವರ ಆಸ್ತಿ ರೂ. 18.20 ಲಕ್ಷದಿಂದ (2008) ರೂ. 10.65 ಕೋಟಿ (2013)ಗೆ ಹೆಚ್ಚಿದೆ. (ಅವರ ಬಳಿ ಇರುವ ಆರು ಮೋಟಾರು ವಾಹನಗಳು, ಆಭರಣಗಳು ಮತ್ತು ಸ್ಥಿರಾಸ್ತಿಗಳ ಮೌಲ್ಯವನ್ನು ಅವರು ನೀಡಿಲ್ಲ).

ಬೆಂಗಳೂರಿನ ಸಿ.ವಿ.ರಾಮನ್ ನಗರ ವಿಧಾನ ಸಭಾ ಕ್ಷೇತ್ರದಿಂದ ಮರು ಆಯ್ಕೆಗೆ ಭಾರತೀಯ ಜನತಾ ಪಾರ್ಟಿಯ ಮೂಲಕ ನಿಂತಿರುವ **ಎಸ್. ರಘು** ಅವರು ತಮ್ಮ ಆಸ್ತಿ ಶೇ. 4241 ಹೆಚ್ಚಾಗಿದೆ ಎಂದು ಘೋಷಿಸುವ ಮೂಲಕ ಮೂರನೇ ಸ್ಥಾನದಲ್ಲಿದ್ದಾರೆ. ಅವರ ಆಸ್ತಿ (2008ರಲ್ಲಿ) ರೂ. 72.88 ಕೋಟಿಯಿಂದ (2013ರಲ್ಲಿ) ರೂ. 31.64 ಕೋಟಿಯಷ್ಟು ಹೆಚ್ಚಾಗಿದೆ.

| ಕ್ರಮ ಸಂಖ್ಯೆ | ಹೆಸರು | 2013ರಲ್ಲಿ ಪಕ್ಷ | 2008ರಲ್ಲಿ ಪ್ರತಿನಿಧಿಸಿದ್ದ ಪಕ್ಷ | ಜಿಲ್ಲೆ | ವಿಧಾನ ಸಭಾ ಕ್ಷೇತ್ರ | 2013ರಲ್ಲಿ ಘೋಷಿಸಿದಿರುವ ಆಸ್ತಿ ಮೌಲ್ಯ | 2008ರಲ್ಲಿ ಘೋಷಿಸಿದ್ದ ಆಸ್ತಿ ಮೌಲ್ಯ | ಆಸ್ತಿ ಹೆಚ್ಚಳ | ಸರಾಸರಿ ಹೆಚ್ಚಳ |
|---|---|---|---|---|---|---|---|---|---|
| 1 | ರಮಾನಾಥ ರೈ | INC | INC | ದಕ್ಷಿಣ ಕನ್ನಡ | ಬಂಟ್ವಾಳ | 3,62,73,209<br>3 Crore+ | 1,71,500<br>1 Lacs+ | 3,61,01,709<br>3 Crore+ | 21051% |
| 2 | ಅಪ್ಪಚ್ಚು ರಂಜನ್ | BJP | BJP | ಕೊಡಗು | ಮಡಿಕೇರಿ | 10,65,09,963<br>10 Crore+ | 18,20,000<br>18 Lacs+ | 10,46,89,963<br>10 Crore+ | 5752% |
| 3 | ಎಸ್. ರಘು | BJP | BJP | ಬಿ.ಬಿ.ಎಂ.ಪಿ. (ಉತ್ತರ) | ಸಿ.ವಿ.ರಾಮನ್ ನಗರ | 31,64,20,000<br>31 Crore+ | 72,88,475<br>72 Lacs+ | 30,91,31,525<br>30 Crore+ | 4241% |
| 4 | ಭರಮಗೌಡ ಆಲಗೋಡು ಕಾಗೆ | BJP | BJP | ಬೆಳಗಾವಿ | ಕಾಗವಾಡ | 3,32,05,667<br>3 Crore+ | 8,60,800<br>8 Lacs+ | 3,23,44,867<br>3 Crore+ | 3758% |
| 5 | ವರ್ತೂರು ಪ್ರಕಾಶ್ | IND | IND | ಕೋಲಾರ | ಕೋಲಾರ | 66,43,621<br>66 Lacs+ | 2,50,000<br>2 Lacs+ | 63,93,621<br>63 Lacs+ | 2557% |

**Table: Assets of top 5 re-contesting MLAs in percentage**

((*) this figure contains only that sum of money that has been explicitly provided in the affidavits, this figure doesn't include the value of assets for which value wasn't provided in the affidavits)

**ವಿಧಾನ ಸಭೆಗೆ 2008ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಅಪರಾಧಿಕ ಮೊಕದ್ದಮ್ಮೆಗಳನ್ನು ಹೊಂದಿದ್ದ ಶಾಸಕರಿಗೆ 2013ರಲ್ಲಿ ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿರುವ ರಾಜಕೀಯ ಪಕ್ಷಗಳು**

2008ರ ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿದ್ದ ಶಪಥ ಪತ್ರದಲ್ಲಿ ಈ ಮುಂದಿನ ಪಟ್ಟಿಯಲ್ಲಿರುವ ಶಾಸಕರು ತಾವು ಅಪರಾಧಿಕ ಮೊಕದ್ದಮ್ಮೆಗಳನ್ನು ಎದುರಿಸುತ್ತಿರುವುದಾಗಿ ಚುನಾವಣಾ ಆಯೋಗದೆದುರು ಘೋಷಿಸಿಕೊಂಡಿದ್ದರು. ಅಂತಹವರಿಗೆ ವಿವಿಧ ರಾಜಕೀಯ ಪಕ್ಷಗಳು ಮತ್ತೆ 2013ರಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಿವೆ.

***ಗಮನಿಸಿ: ಈ ವಿಶ್ಲೇಷಣೆಯು 2008ರಲ್ಲಿ ಅಭ್ಯರ್ಥಿಗಳು ಇತ್ತಿರುವ ಸ್ವಯಂಘೋಷಣಾ ಮಾಹಿತಿಯನ್ನು ಆಧರಿಸಿದೆ. ಆ ನಂತರ ಕೆಲವು ಶಾಸಕರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರಬಹುದು ಅಥವಾ ಪಕ್ಷ ಬದಲಾಯಿಸಿರಬಹುದು. ತೀರಾ ಇತ್ತೀಚಿನ ಮಾಹಿತಿಯನ್ನು, ಎಲ್ಲ ಅರ್ಜಿಗಳ ವಿಶ್ಲೇಷಣೆ ನಂತರ ನೀಡಲಾಗುತ್ತದೆ. ಆದಾಗ್ಯೂ, 2008ರಲ್ಲಿ ಅಭ್ಯರ್ಥಿಗಳೇ ನೀಡಿದ್ದ ಮಾಹಿತಿ ಆಧರಿಸಿ ಈ ವಿಶ್ಲೇಷಣೆಯನ್ನು ಮಾಡಲಾಗಿದೆ.***

| ಪಕ್ಷ | 2008ರ ಚುನಾವಣಾ ಸಂದರ್ಭದಲ್ಲಿ ತಮ್ಮ ಮೇಲೆ ಅಪರಾಧಿಕ ಮೊಕದ್ದಮ್ಮೆಗಳಿವೆ ಎಂದು ಘೋಷಿಸಿಕೊಂಡಿದ್ದ ಶಾಸಕರ ಸಂಕ್ಯೆ | 2013ರ ಚುನಾವಣೆಯಲ್ಲಿ, ಈ ಮೊದಲು ಅಪರಾಧಿಕ ಮೊಕದ್ದಮ್ಮೆ ಇತ್ತೆಂದು ಘೋಷಿಸಿಕೊಂಡವರಿಗೆ ಮತ್ತೆ ಟಿಕೆಟ್ ನೀಡಿರುವ ಸಂಖ್ಯೆ |
|---|---|---|
| BJP | 26 | 19 |
| INC | 9 | 8 |
| JD(S) | 5 | 5 |
| IND | 2 | 5 |
| KJP | 0 | 3 |
| **Total** | **42** | **40*** |

*** ಗಮನಿಸಿ: ಇಬ್ಬರು ಶಾಸಕರು ಚುನಾವಣೆಗೆ ಸ್ಪರ್ಧಿಸುತ್ತಿಲ್ಲ.**

ವಿವರ **:**

| ಕ್ರಮಸಂಖ್ಯೆ | ಉಮೇದುವಾರರ ಹೆಸರು | 2008ರಲ್ಲಿ ಘೋಷಿಸಿಕೊಂಡಿದ್ದ ಒಟ್ಟು ಅಪರಾಧಿಕ ಮೊಕದ್ದಮ್ಮೆಗಳು | 2008ರಲ್ಲಿ ಪ್ರತಿನಿಧಿಸಿದ್ದ ರಾಜಕೀಯ ಪಕ್ಷ | 2013ರಲ್ಲಿ ಪ್ರತಿನಿಧಿಸುತ್ತಿರುವ ರಾಜಕೀಯ ಪಕ್ಷ |
|---|---|---|---|---|
| 1. | ಸಿ.ಟಿ. ರವಿ | 5 | BJP | BJP |
| 2. | ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ | 4 | BJP | BJP |
| 3. | ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ | 1 | INC | INC |
| 4. | ಈಶ್ವರ ಭೀಮಣ್ಣ ಖಂಡ್ರೆ | 3 | INC | INC |
| 5. | ಬಿ.ನಾಗೇಂದ್ರ | 1 | BJP | IND |

| ಕ್ರಮಸಂಖ್ಯೆ | ಉಮೇದುವಾರರ ಹೆಸರು | 2008ರಲ್ಲಿ ಘೋಷಿಸಿಕೊಂಡಿದ್ದ ಒಟ್ಟು ಅಪರಾಧಿಕ ಮೊಕದ್ದಮ್ಮೆಗಳು | 2008ರಲ್ಲಿ ಪ್ರತಿನಿಧಿಸಿದ್ದ ರಾಜಕೀಯ ಪಕ್ಷ | 2013ರಲ್ಲಿ ಪ್ರತಿನಿಧಿಸುತ್ತಿರುವ ರಾಜಕೀಯ ಪಕ್ಷ |
|---|---|---|---|---|
| 6. | ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ | 1 | BJP | BJP |
| 7. | ತನ್ವೀರ್ ಸೇಟ್ | 1 | INC | INC |
| 8. | ಆಸ್ನೋಟಿಕರ್ ಆನಂದ ವಸಂತ್ | 1 | BJP | BJP |
| 9. | ಎಂ.ಪಿ. ರೇಣುಕಾಚಾರ್ಯ | 8 | BJP | KJP |
| 10. | ಬಿ.ಕೆ. ಸಂಗಮೇಶ್ವರ | 1 | INC | IND |
| 11. | ಆನಂದ್ ಸಿಂಗ್ | 2 | INC | BJP |
| 12. | ನೆಹ್ರು ಓಲೇಕರ್ | 2 | BJP | KJP |
| 13. | ಎಸ್. ಆರ್. ಮಹೇಷ್ | 1 | JD(S) | JD(S) |
| 14. | ನಾಡಗೌಡ ವೆಂಕಟರಾವ್ | 1 | JD(S) | JD(S) |
| 15. | ಹುಸನೂರ್ ರಮೇಶ್ ಬಾಳಪ್ಪ | 1 | BJP | BJP |
| 16. | ವಾಲ್ಮೀಕಿ ನಾಯಕ್ | 1 | BJP | BJP |
| 17. | ಶೋಭಾ ಕರಂದ್ಲಾಜೆ | 1 | BJP | KJP |
| 18. | ಎಸ್.ಆರ್. ಶ್ರೀನಿವಾಸ | 11 | JD(S) | JD(S) |
| 19. | ಎಸ್. ಎನ್. ಕೃಷ್ಣಯ್ಯ ಶೆಟ್ಟಿ | 10 | BJP | IND |
| 20. | ಸುಧಾಕರ್ ಡಿ. | 7 | IND | INC |
| 21. | ಬಿ. ಸುರೇಶ್ ಗೌಡ | 3 | BJP | BJP |
| 22. | ಯು. ಟಿ. ಖಾದರ್ | 2 | INC | INC |
| 23. | ಎಸ್.ಎ. ರಾಮದಾಸ್ | 2 | BJP | BJP |
| 24. | ಬಸವರಾಜನ್ | 2 | JD(S) | JD(S) |
| 25. | ಎಸ್.ಎ. ರವೀಂದ್ರನಾಥ್ | 2 | BJP | BJP |
| 26. | ಕಿಮ್ಮನೆ ರತ್ನಾಕರ | 2 | INC | INC |
| 27. | ಲಾಲಾಜಿ ಆರ್ ಮೆಂಡನ್ | 1 | BJP | BJP |
| 28. | ಬಿ.ಝಡ್. ಝಮೀರ್ ಅಹ್ಮದ್ ಖಾನ್ | 1 | JD(S) | JD(S) |
| 29. | ಗೂಳಿಹಟ್ಟಿ ಡಿ. ಶೇಖರ್ | 1 | IND | IND |
| 30. | ಅರವಿಂದ ಲಿಂಬಾವಳಿ | 1 | BJP | BJP |
| 31. | ಮುರುಗೇಷ್ ರುದ್ರಪ್ಪ ನಿರಾಣಿ | 1 | BJP | BJP |
| 32. | ಅರಕೆರೆ ಶಿವನಗೌಡ ನಾಯಕ್ | 1 | BJP | BJP |
| 33. | ಬೋಪಯ್ಯ ಕೆ.ಜಿ. | 1 | BJP | BJP |
| 34. | ಡಾ. ಬಗಲಿ ಸಾರ್ವಬೌಮ ಸಟಗೌಡ | 1 | BJP | IND |
| 35. | ಮಂಜು | 1 | INC | INC |

| ಕ್ರಮಸಂಖ್ಯೆ | ಉಮೇದುವಾರರ ಹೆಸರು | 2008ರಲ್ಲಿ ಘೋಷಿಸಿಕೊಂಡಿದ್ದ ಒಟ್ಟು ಆಪರಾಧಿಕ ಮೊಕದ್ದಮ್ಮೆಗಳು | 2008ರಲ್ಲಿ ಪ್ರತಿನಿಧಿಸಿದ್ದ ರಾಜಕೀಯ ಪಕ್ಷ | 2013ರಲ್ಲಿ ಪ್ರತಿನಿಧಿಸುತ್ತಿರುವ ರಾಜಕೀಯ ಪಕ್ಷ |
|---|---|---|---|---|
| 36. | ಎನ್. ಎಸ್. ನಂದೀಶ್ ರೆಡ್ಡಿ | 1 | BJP | BJP |
| 37. | ಹೇಮಚಂದ್ರ ಸಾಗರ ಡಿ. | 1 | BJP | Not contesting |
| 38. | ಕೆ.ಎಸ್. ಈಶ್ವರಪ್ಪ | 1 | BJP | BJP |
| 39. | ಅಮರೇಶ್ | 1 | INC | INC |
| 40. | ಕೆ. ರಘುಪತಿ ಭಟ್ | 1 | BJP | Not contesting |
| 41. | ಎಸ್. ಶಿವಣ್ಣ ಸೊಗಡು | 1 | BJP | BJP |
| 42. | ಅಭಯ್ ಪಾಟೀಲ್ | 1 | BJP | BJP |

ಇದರೊಡನೆ, ಲೋಕಾಯುಕ್ತದಿಂದ ಆಪಾದನೆಗೊಳಗಾಗಿರುವ ಕೆಲವರಿಗೆ ರಾಜಕೀಯ ಪಕ್ಷಗಳು ಟಿಕೆಟ್ ನೀಡಿಲ್ಲ. ಇದರಲ್ಲಿ ಕಟ್ಟಾ ಸುಬ್ರಮಣ್ಯಂ ನಾಯ್ಡು (ಬಿ.ಜೆ.ಪಿ) ಹೆಬ್ಬಾಳ ವಿಧಾನ ಸಭಾ ಕ್ಷೇತ್ರದವರು ಸೇರಿದ್ದಾರೆ.